ಪಿ.ಡಬ್ಲ್ಯೂ: 01

ದಿನಾಂಕಃ 05-11-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ 7 ನೇ ಪ್ರತಿವಾದಿ ಪರ ಶ್ರೀ ಕೆ.ಎಸ್. ವಕೀಲರಿಂದಃ

ಈ ದಾವೆ ಹೂಡುವ ಮುಂಚೆ ನಾನು ಹಾಗೂ 7 ನೇ ಪ್ರತಿವಾದಿ ಚೆನ್ನಾಗಿಯೇ ಇದ್ದೇವು. ದಾವಾ ಆಸ್ತಿಯ ಐಟಂ ನಂಃ1, 3, 4, 6 ಮತ್ತು 7 ರ ಜಮೀನುಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ತಾತನ ಪಿತ್ರಾರ್ಜಿತ ಆಸ್ತಿಗಳು ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆದರೆ ನಾನು ನೋಡಿರುವುದಿಲ್ಲ. ಸದರಿ ದಾವಾ ಆಸ್ತಿಗಳು ನಮ್ಮ ತಂದೆಯವರು ಕ್ರಯಕ್ಕೆ ಪಡೆದಿದ್ದವು ಎಂದರೆ ಸರಿಯಲ್ಲ. ಚನ್ನಸೋಗೆ ಗ್ರಾಮದ ಸ.ನಂಃ 48/2 ರ 2 ಎಕರೆ 8 ಗುಂಟೆ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ಸೇರಿಸಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಎಲ್ಲಾ ಆಸ್ತಿಗಳ ಮೌಲ್ಯ ಎಷ್ಟು ಬೆಲೆ ಬಾಳುತ್ತದೆ ಎಂದರೆ ಸಾಕ್ಷಿಯು ನಾವು ದಾವೆ ದಾಖಲು ಮಾಡಿದಾಗ ಒಂದು ಎಕರೆಗೆ 10 ಲಕ್ಷ ರೂ. ಬೆಲೆ ಬಾಳುತ್ತದೆ ಹಾಗೂ ಈಗ ಒಂದು ಎಕರೆಗೆ ರೂ. ಹದಿನೈದು ಲಕ್ಷ ಬೆಲೆ ಬಾಳುತ್ತದೆ ಎಂದು ನುಡಿಯುತ್ತಾರೆ. 30 ವರ್ಷಗಳ ಹಿಂದೆ ನಮ್ಮ ಮದುವೆ ಆಗಿರುತ್ತದೆ. ಮದುವೆಯಾದಾಗಿನಿಂದ ಇಲ್ಲಿಯವರೆಗೆ ನಾನು ನನ್ನ ಗಂಡನ ಮನೆಯಲ್ಲಿ ವಾಸವಾಗಿರುತ್ತೇನೆ. ದಾವಾ ಆಸ್ತಿಯ ಮೇಲೆ ನನಗೆ ಭಾಗದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಆಗದಿರುವವರ ಮಾತು ಕೇಳಿಕೊಂಡು ಈ ಸುಳ್ಳು ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ. ದಾವಾ ಆಸ್ತಿಯ ಐಟಂ ನಂಃ1 ,3 , 4, 6 ಮತ್ತು 7 ರ ಜಮೀನುಗಳು ನಮ್ಮ ತಂದೆ ಸ್ವಯಾರ್ಜಿತ ಆಸ್ತಿಗಳು ಎಂದು ಗೊತ್ತಿದ್ದರೂ ಸಹ ನಾನು ಈ ಸುಳ್ಳು ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.